# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 809 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20/09/2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು; | ❖ ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹಾಗೂ ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2014ನ್ನು ರಾಜ್ಯಾದಂತ ಜಾರಿಗೊಳಿಸಲಾಗುತ್ತಿದೆ.<br><br>❖ ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಬಲಪಡಿಸಲು ಕರ್ನಾಟಕ ರಾಜ್ಯವು ಕಾಯ್ದೆಗೆ ತಿದ್ದುಪಡಿಯನ್ನು ತಂದಿದ್ದು,ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016ರನ್ನು ದಿನಾಂಕ: 03.03.2018ರಿಂದ ಜಾರಿಗೆ ತಂದಿರುತ್ತದೆ.<br><br>• ಕರ್ನಾಟಕದಲ್ಲಿ ಈ ಅಧಿನಿಯಮದನ್ವಯ ಬಾಲ್ಯ ವಿವಾಹವು ಪ್ರಾರಂಭದಿಂದಲೇ ಅನೂರ್ಜಿತವಾಗತಕ್ಕದ್ದಾಗಿದೆ.<br>• ಈ ಕಾಯ್ದೆಯ ಪ್ರಕಾರ "ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಡೆದ ಅಪರಾಧದ ಸಂಜ್ಞೇಯತೆಯನ್ನು ಗಮನಿಸಿ ತಾನಾಗಿಯೇ ಕ್ರಮ ತೆಗೆದುಕೊಳ್ಳತಕ್ಕದ್ದು. " (ಸು-ಮೋಟೋ)<br>• ಈ ಕಾಯ್ದೆಯಡಿ ಮಹಿಳೆಯರೂ ಕೂಡ ಜೈಲು ಶಿಕ್ಷೆಗೆ ಅರ್ಹರಾಗಿರುತ್ತಾರೆ.<br>• ಈ ತಿದ್ದುಪಡಿಯ ಸೆಕ್ಷನ್ 9 ಮತ್ತು 13 ರ ಪ್ರಕಾರ ತಪ್ಪಿತಸ್ಥ ವಯಸ್ಕ ಪತಿ, ತಡೆಯಾಜ್ಞೆ ಉಲ್ಲಂಘಿಸಿದವರು ಕನಿಷ್ಟ ಒಂದು ವರ್ಷ ಆದರೆ ಎರಡು ವರ್ಷಗಳ ವರೆಗೆ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ಜುಲ್ಮಾನೆ ಅಥವಾ ಅವರೆಡು ಶಿಕ್ಷೆಗೆ ಅರ್ಹರು.<br>• ಈ ತಿದ್ದುಪಡಿಯ ಸೆಕ್ಷನ್ 10 ಮತ್ತು 11 ರ ಪ್ರಕಾರ ಬಾಲ್ಯವಿವಾಹ ನಡೆಸಿದ ಮತ್ತು ಉತ್ತೇಜಿಸಿದ ತಪ್ಪಿತಸ್ಥರು ಕನಿಷ್ಠ 1 ವರ್ಷದಿಂದ ಗರಿಷ್ಠ 2 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗುವರು.<br><br>❖ ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಒಳಗೊಂಡಂತೆ ಪ್ರಮುಖ 10 ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ (ರಾಜ್ಯ/ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತ್ ವ್ಯಾಪ್ತಿಯ) 58,000 ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ಅವರ ಅಧಿಕಾರದ |

| | | |
|---|---|---|
| | | ವ್ಯಾಪ್ತಿಯನ್ನು ನಿಗದಿ ಪಡಿಸಿ ವಿವಿಧ ಹಂತಗಳಲ್ಲಿ ನೇಮಿಸಿ 2018ರಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಅವರ ಪ್ರಕಾರ್ಯ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ, 10 ವಿವಿಧ ಇಲಾಖೆಗಳ ನಿರ್ದಿಷ್ಟ ಪಾತ್ರಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ. |
| ಆ. | ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ಒಟ್ಟು ಬಾಲ್ಯವಿವಾಹ ಪ್ರಕಣಗಳು ಎಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ಒಟ್ಟು ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ: 10,352<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ. | ಈ ರೀತಿ ಬಾಲ್ಯ ವಿವಾಹಗಳಾಗಲು ಕಾರಣಗಳನ್ನು ಸರ್ಕಾರ ಪತ್ತೆ ಮಾಡಿದೆಯೇ; ಯಾವ ಯಾವ ಕಾರಣಗಳಿಗಾಗಿ ಬಾಲ್ಯ ವಿವಾಹಗಳಾಗುತ್ತಿದೆ? (ವಿವರ ನೀಡುವುದು) | ಬಾಲ್ಯವಿವಾಹಗಳಾಗಲು ಕಾರಣಗಳು ಈ ಕೆಳಗಿನಂತಿವೆ.<br><br>• ಬಡತನ, ಅನಕ್ಷರತೆ ಹಾಗೂ ಮೂಢನಂಬಿಕೆ<br>• ಕೆಲವು ಸಮುದಾಯದ ಸಂಪ್ರದಾಯದಂತೆ ಹೆಣ್ಣು ಋತುಮತಿಯಾಗುವ ಮೊದಲೇ ಮದುವೆ ಮಾಡುವುದು.<br>• ಪಾಲಕರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಲು.<br>• ಬಾಲ್ಯವಿವಾಹದ ದುಷ್ಪರಿಣಾಮದ ಬಗ್ಗೆ ಅರಿವು ಇಲ್ಲದೇ ಇರುವುದು.<br>• ರಕ್ತ ಸಂಬಂಧವನ್ನು ಉಳಿಸಿಕೊಳ್ಳಲು<br>• ಹೆಣ್ಣುಮಕ್ಕಳ ಸುರಕ್ಷತೆಗಾಗಿ<br>• ದೊಡ್ಡ ಮಗ/ಮಗಳ ಮದುವೆಯೊಂದಿಗೆ ವಿವಾಹ ಮಾಡಿದಲ್ಲಿ ಒಂದೇ ಖರ್ಚಿನಲ್ಲಿ ಎರಡು ಮದುವೆ ಆಗುತ್ತದೆಂಬ ಭಾವನೆ<br>• ವೃದ್ಧರ ಅಥವಾ ಅನಾರೋಗ್ಯದ ಹಿರಿಯರ ಆಸೆ ಈಡೇರಿಸುವ ಉದ್ದೇಶದಿಂದ<br>• ಎಳೆ ವಯಸ್ಸಿನಲ್ಲಿ ಮಗಳಿಗೆ ಮದುವೆ ಮಾಡಿದರೆ ವರದಕ್ಷಿಣೆ ಕಡಿಮೆಯಾಗುತ್ತದೆಯೆಂಬ ಕಾರಣ<br>• ಎರಡನೇ ಹಾಗೂ ಮೂರನೇ ಮದುವೆಗಾಗಿ ಹೆಣ್ಣು ಮಗುವನ್ನು ಮದುವೆ ಮಾಡುವುದು.<br>• ಹದಿಹರೆಯದ ವ್ಯಾಮೋಹ/ಪ್ರೇಮ ವಿವಾಹಗಳನ್ನು ತಡೆಯಲು ಪೋಷಕರಿಂದ ಕೈಗೊಳ್ಳುವ ಅವಸರದ ಕ್ರಮ. |

**ಸಂಖ್ಯೆ:ಮಮಇ 165 ಮಮಅ 2022**

Halappa BA

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

| ಅನುಬಂಧ | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | | | | | | | | | | | | | | | | | | | | | |
| ಶ್ರೀ . ಶಶೀಲ್, ಜಿ ನಮೋಶಿ (ಶಿಕ್ಷಕರ ಕ್ಷೇತ್ರ) ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 778 (809) ಕ್ಕೆ ಉತ್ತರ | | | | | | | | | | | | | | | | | | | | | |
| ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ (ಜಿಲ್ಲಾವಾರು) | | | | | | | | | | | | | | | | | | | | | |
| ಕ್ರ.ಸಂ | ಜಿಲ್ಲೆಯ ಹೆಸರು | 2017-18 | | | | 2018-19 | | | | 2019-20 | | | | 2020-21 | | | | 2021-22 | | | |
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 1 | ಬಾಗಲಕೋಟೆ | 25 | 25 | 0 | 0 | 43 | 36 | 7 | 0 | 65 | 60 | 5 | 0 | 113 | 95 | 18 | 10 | 177 | 138 | 39 | 39 |
| 2 | ಬೆಂಗಳೂರು (ಗ್ರಾ) | 66 | 45 | 21 | 19 | 8 | 7 | 1 | 1 | 5 | 5 | 0 | 0 | 74 | 66 | 8 | 8 | 59 | 51 | 8 | 8 |
| 3 | ಬೆಂಗಳೂರು (ನ) | 115 | 104 | 11 | 8 | 27 | 22 | 5 | 2 | 20 | 17 | 3 | 2 | 43 | 34 | 8 | 8 | 51 | 38 | 13 | 12 |
| 4 | ಬೆಳಗಾವಿ | 52 | 39 | 13 | 2 | 150 | 138 | 12 | 0 | 144 | 132 | 12 | 6 | 187 | 169 | 18 | 13 | 140 | 124 | 16 | 16 |
| 5 | ಬಳ್ಳಾರಿ | 72 | 64 | 8 | 8 | 107 | 105 | 2 | 2 | 68 | 65 | 3 | 3 | 261 | 249 | 12 | 12 | 207 | 190 | 17 | 17 |
| 6 | ಬೀದರ್ | 136 | 132 | 4 | 0 | 48 | 43 | 5 | 1 | 86 | 86 | 0 | 0 | 72 | 69 | 3 | 1 | 42 | 42 | 0 | 0 |
| 7 | ವಿಜಯಪುರ | 27 | 27 | 0 | 0 | 68 | 67 | 1 | 1 | 58 | 58 | 0 | 0 | 111 | 110 | 1 | 0 | 82 | 55 | 27 | 27 |
| 8 | ಚಾಮರಾಜನಗರ | 32 | 32 | 0 | 0 | 21 | 21 | 0 | 0 | 25 | 22 | 3 | 3 | 87 | 86 | 1 | 1 | 72 | 67 | 5 | 5 |
| 9 | ಚಿಕ್ಕಬಳ್ಳಾಪುರ | 13 | 11 | 2 | 1 | 56 | 49 | 7 | 4 | 113 | 104 | 9 | 9 | 140 | 128 | 13 | 13 | 136 | 109 | 27 | 27 |
| 10 | ಚಿಕ್ಕಮಗಳೂರು | 33 | 32 | 1 | 1 | 24 | 22 | 2 | 2 | 42 | 37 | 5 | 5 | 109 | 94 | 15 | 11 | 104 | 87 | 17 | 17 |
| 11 | ಚಿತ್ರದುರ್ಗ | 72 | 63 | 9 | 4 | 57 | 54 | 3 | 0 | 57 | 55 | 2 | 2 | 132 | 128 | 4 | 4 | 137 | 128 | 9 | 8 |
| 12 | ದಕ್ಷಿಣ ಕನ್ನಡ | 7 | 6 | 1 | 1 | 11 | 9 | 2 | 0 | 15 | 11 | 4 | 4 | 21 | 20 | 1 | 1 | 12 | 11 | 1 | 1 |
| 13 | ದಾವಣಗೆರೆ | 15 | 14 | 1 | 1 | 72 | 70 | 2 | 1 | 60 | 59 | 1 | 1 | 79 | 72 | 7 | 7 | 73 | 67 | 6 | 6 |
| 14 | ಧಾರವಾಡ | 48 | 43 | 5 | 0 | 9 | 9 | 0 | 0 | 13 | 11 | 2 | 1 | 11 | 11 | 0 | 0 | 32 | 22 | 10 | 10 |
| 15 | ಗದಗ | 91 | 85 | 6 | 0 | 22 | 22 | 0 | 0 | 32 | 31 | 1 | 1 | 60 | 57 | 3 | 3 | 48 | 46 | 2 | 2 |
| 16 | ಕಲಬುರ್ಗಿ | 75 | 70 | 5 | 3 | 125 | 118 | 7 | 0 | 120 | 110 | 10 | 10 | 134 | 130 | 4 | 1 | 171 | 165 | 6 | 3 |
| 17 | ಹಾಸನ | 41 | 37 | 4 | 3 | 40 | 38 | 2 | 0 | 30 | 30 | 0 | 0 | 160 | 121 | 39 | 29 | 106 | 67 | 39 | 31 |
| 18 | ಹಾವೇರಿ | 154 | 150 | 4 | 6 | 24 | 23 | 1 | 0 | 31 | 31 | 0 | 0 | 52 | 52 | 0 | 0 | 71 | 71 | 0 | 0 |
| 19 | ಕೊಡಗು | 55 | 55 | 0 | 0 | 10 | 8 | 2 | 0 | 20 | 19 | 1 | 1 | 10 | 8 | 2 | 1 | 10 | 7 | 3 | 3 |
| 20 | ಕೋಲಾರ | 19 | 19 | 0 | 0 | 17 | 17 | 0 | 0 | 38 | 37 | 1 | 1 | 94 | 93 | 1 | 2 | 74 | 68 | 6 | 6 |
| 21 | ಕೊಪ್ಪಳ | 4 | 4 | 0 | 0 | 98 | 92 | 6 | 6 | 275 | 270 | 5 | 3 | 119 | 111 | 8 | 4 | 67 | 67 | 0 | 0 |
| 22 | ಮಂಡ್ಯ | 24 | 24 | 0 | 0 | 47 | 29 | 18 | 11 | 58 | 30 | 28 | 26 | 76 | 42 | 34 | 28 | 142 | 66 | 76 | 70 |
| 23 | ಮೈಸೂರು | 22 | 21 | 1 | 0 | 73 | 69 | 4 | 5 | 91 | 84 | 7 | 7 | 277 | 246 | 31 | 31 | 238 | 205 | 33 | 33 |
| 24 | ರಾಯಚೂರು | 10 | 7 | 3 | 3 | 31 | 30 | 1 | 0 | 41 | 39 | 2 | 2 | 95 | 77 | 18 | 17 | 147 | 135 | 12 | 4 |
| 25 | ರಾಮನಗರ | 24 | 24 | 0 | 0 | 37 | 30 | 7 | 2 | 90 | 59 | 31 | 18 | 129 | 109 | 20 | 7 | 92 | 81 | 11 | 9 |
| 26 | ಶಿವಮೊಗ್ಗ | 7 | 7 | 0 | 0 | 55 | 42 | 13 | 3 | 65 | 48 | 17 | 17 | 125 | 107 | 18 | 18 | 94 | 76 | 18 | 18 |
| 27 | ತುಮಕೂರು | 46 | 45 | 1 | 1 | 50 | 45 | 5 | 5 | 55 | 51 | 4 | 4 | 130 | 123 | 7 | 7 | 111 | 100 | 11 | 11 |
| 28 | ಉಡುಪಿ | 26 | 24 | 2 | 0 | 2 | 1 | 1 | 1 | 1 | 1 | 0 | 0 | 1 | 1 | 0 | 0 | 0 | 0 | 0 | 0 |
| 29 | ಉತ್ತರ ಕನ್ನಡ | 38 | 38 | 0 | 0 | 9 | 7 | 2 | 1 | 12 | 12 | 0 | 0 | 21 | 20 | 1 | 1 | 16 | 15 | 1 | 1 |
| 30 | ಯಾದಗಿರಿ | 4 | 4 | 0 | 0 | 53 | 52 | 1 | 0 | 49 | 49 | 0 | 0 | 84 | 83 | 1 | 1 | 108 | 103 | 5 | 5 |
| **Total** | | **1353** | **1251** | **102** | **61** | **1394** | **1275** | **119** | **48** | **1779** | **1623** | **156** | **130** | **3007** | **2711** | **296** | **239** | **2819** | **2401** | **418** | **389** |